**ಅಮಲ್ಜಾರಿ ಸಂಖ್ಯೆ** 4/2020 **ಓ.ಡಬ್ಲೂಃ 2**

ಸಾಕ್ಷಿಯನ್ನು ದಿಃ **04.11.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ಡಿ.ಹೆಚ್.ಆರ್ ಶ್ರೀ ಪಿ.ಎಲ್.ಕೆ ಪರವಾಗಿ ಡಿ.ವಿ.ಎಸ್ ವಕೀಲ**ರಿಂದ**

ನಾನು ತರಕಾರಿ ವ್ಯಾಪಾರ ಮಾಡುತ್ತೇನೆ ಎಂಬ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಈ ಪ್ರಕರಣದ ಸ್ವತ್ತಿನ ಸರ್ವೆ ನಂ. 4/5 ವಿಸ್ತೀರ್ಣ 10 ಗುಂಟೆ ಆಗಿರುತ್ತದೆ. ಸದರಿ ಸ್ವತ್ತನ್ನು ನಾನು ಅಳತೆ ಮಾಡಿ ನೋಡಿಲ್ಲ, ಸರ್ವೆ ಮಾಡಿದಾಗ ನಾನು ಅಲ್ಲಿದ್ದೆ. ಈ 10 ಗುಂಟೆ ಪೈಕಿ ಜೆ.ಡಿ.ಆರ್ ನಂ.1 ರವರಿಗೆ ಎಷ್ಟು ಹೋಗಿದೆ ಎಂದು ನನಗೆ ಗೊತ್ತಿಲ್ಲ. ಅದೆ ರೀತಿ ಜೆ.ಡಿ.ಆರ್ 1 ಮತ್ತು ಅವರ ಅಣ್ಣನಾದ ನಂಜುಂಡೇಗೌಡರಿಗೆ ಎಷ್ಟು ಜಮೀನು ಹೋಗಿದೆ ಎಂದು ನನಗೆ ಗೊತ್ತಿಲ್ಲ. ರಾಮೇಗೌಡರಿಗೆ ಎಷ್ಟು ಜಮೀನು ಹೋಗಿದೆ ಎಂದರೆ ಅವರು 10 ಗುಂಟೆ ಸ್ವಾಧೀನದಲ್ಲಿ ಇದ್ದಾರೆ ಅವರಿಗೆ ಇದೆ ನ್ಯಾಯಾಲಯದಲ್ಲಿ ಡಿಕ್ರಿ ಆಗಿತ್ತು ಎನ್ನುತ್ತಾರೆ. ತಕರಾರುದಾರರಾದ ಮಂಜುನಾಥ ರವರು ಸದರಿ 10 ಗುಂಟೆ ಜಮೀನನ್ನು ರಾಮೇಗೌಡರಿಂದ ಕೊಂಡಿದ್ದಾರೆ. ರಾಮೇಗೌಡರ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ, ಚಕ್ಕುಬಂದಿ ಎಂದರೆ ಏನು ಎಂದೆ ನನಗೆ ಗೊತ್ತಿಲ್ಲ. ತಕರಾರುದಾರರು ರಾಮೇಗೌಡರಿಂದ ಈ 10 ಗುಂಟೆ ಜಮೀನು ಖರೀದಿ ಮಾಡಿದ್ದಾರೆ ಎಂದು ನಾನು ಹೇಳಿದ್ದು, ಸದರಿ ಪತ್ರಕ್ಕೆ ಸಾಕ್ಷಿಯಾಗಿ ನಾನು ಸಹಿ ಮಾಡಿಲ್ಲ. ಸರ್ವೆನಂ. 4/5 ರಲ್ಲಿ 1 ಶೀಟಿನ ಮನೆ ಇದೆ ಎಂದು ಅದನ್ನು ತಕರಾರುದಾರರಾದ ಮಂಜುನಾಥ ರವರು ಕಟ್ಟಿದ್ದಾರೆ. ಸದರಿ ಮನೆ ಕಟ್ಟಲು ಅವರು ಪರವಾನಿಗೆ ಪಡೆದುಕೊಂಡಿರುವುದಿಲ್ಲ. ಜೆ.ಡಿ.ಅರ್ ನಂ. 1 ರ ಮತ್ತು ನಂಜಂಮ್ಮನವರು ವಿಭಾಗದ ದಾವೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಜೆ.ಡಿ.ಆರ್ ನಂ. 1 ಮತ್ತು ಅವರ ಕುಟುಂಬದವರು ಡಿಕ್ರಿ ಹೋಲ್ಡರ್ ರವರಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರು ಆಧಾರದ ಮೇಲೆ ಡಿ.ಹೆಚ್. ಆರ್ ಪರವಾಗಿ ನ್ಯಾಯಾಲಯದಲ್ಲಿ ಡಿಕ್ರಿ ಹೊರಡಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಓ.ಎಸ್. ನಂ. 7/2007 ರಲ್ಲಿ ಈ ತಕರಾರುರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಅರ್ಜಿ ಸರ್ವೆ ನಂ. 4/5 ರ ಸುತ್ತ ಮುತ್ತ ನನಗೆ ಸೇರಿದ ಜಮೀನು ಇರುವುದಿಲ್ಲ. ನಾನು ಯಾವುದೆ ರೀತಿಯ ತರಕಾರಿ ವ್ಯಾಪಾರ ಮಾಡುವುದಿಲ್ಲ ಈ ಪ್ರಕರಣ ಯಾವುದೆ ವಿಚಾರ ಗೊತ್ತಿಲ್ಲ ಆದಾಗ್ಯೂ ಡಿ.ಹೆಚ್.ಆರ್ ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿ ಸ್ವತ್ತಿನ ವಿಚಾರ ನನಗೆ ತಿಳಿದಿದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.